# ಗದ್ಯ ಭಾಗ

# 1. ಯುದ್ಧ (ಸಣ್ಣಕತೆ)

**– ಸಾರಾ ಅಬೂಬಕ್ಕರ್**

### ಸಾಹಿತ್ಯ ಪ್ರಕಾರದ ಪರಿಚಯ :

ಗದ್ಯ ಸಾಹಿತ್ಯದ ವಿವಿಧ ಪ್ರಕಾರಗಳಾದ , ಕಾದಂಬರಿ , ಜೀವನಚರಿತ್ರೆ , ಆತ್ಮಕತೆ , ಸಣ್ಣಕತೆ , ಪ್ರಬಂಧ , ನಾಟಕ , ಇತ್ಯಾದಿಗಳಲ್ಲಿ ಸಣ್ಣಕಥೆಯೂ ಕೂಡ ಒಂದು. ಹೊಸಗನ್ನಡದ ಬಹುಜನಪ್ರಿಯ ಪ್ರಕಾರಗಳಲ್ಲಿ ಒಂದಾದ ಸಣ್ಣಕಥೆ ದೇಶೀಯ ಹಾಗೂ ವಿಶ್ವ ಸಂಸ್ಕೃತಿಯ ಅಭಿವ್ಯಕ್ತಿಗೆ ಪೂರಕ ಮಾಧ್ಯಮವಾಗಿದೆ. ಒಂದು ಘಟನೆ ಅಥವಾ ವಿಷಯವನ್ನು ತೆಗೆದುಕೊಂಡು ಒಂದೇ ಒಂದು ಪಾತ್ರ ಚಿತ್ರಣದ ಮೂಲಕ ಭಾವನಾತ್ಮಕವಾಗಿ, ಸುಂದರವಾಗಿ ಚಿತ್ರಿಸುವುದು ಸಣ್ಣ ಕತೆಯಾಗಿದೆ. ಅಮೆರಿಕೆಯ ಎಡ್ಗರ್ ಆಲನ್ ಪೊ ಎಂಬಾತನಿಂದ ಸಣ್ಣಕಥೆ ಬೆಳೆದು ಬಂತು. ಸಣ್ಣಕಥೆಯ ಜನಕನಾದ ಈತ **“ಒಂದೇ ಓದಿನಲ್ಲಿ ಮುಗಿಯುವದೇ ಕಥೆ”** ಎನ್ನುತ್ತಾನೆ. ಪಾಣಿನಿ **“ಕಥೆಯೆಂಬುದು ಸತ್ಯವನ್ನೊಳಗೊಂಡ ಕಲ್ಪನಾ ಪ್ರಬಂಧ”** ಎಂದಿದ್ದಾನೆ.

‘ಸಣ್ಣಕಥೆ’ ಎಂಬುದು ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯಿಂದಲೇ ಕನ್ನಡಕ್ಕೆ ಬಂತು. ಇಂಗ್ಲೀಷ್‌ನ ‘Short Story’ ಕನ್ನಡದಲ್ಲಿ ‘ಸಣ್ಣಕಥೆ’ ಎಂದು ಅನುವಾದಗೊಂಡು ಬಳಕೆಯಲ್ಲಿ ಬಂದಿದೆ. **‘ಸಣ್ಣಕಥೆ’ ಎಂಬುದನ್ನು ಕನ್ನಡದಲ್ಲಿ ಮೊದಲು ಬಳಸಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್.(** ‘ಶ್ರೀನಿವಾಸ’ ಎಂಬ ಕಾವ್ಯನಾಮ ) ಕನ್ನಡದಲ್ಲಿ ಈ ಸಾಹಿತ್ಯ ಪ್ರಕಾರವನ್ನು ಬಹು ಜನಪ್ರಿಯಗೊಳಿಸುವುದರೊಂದಿಗೆ ಶ್ರೀಮಂತಗೊಳಿಸಿದ, ಸಂಪನ್ನಗೊಳಿಸಿದ ಶ್ರೇಯಸ್ಸು ಮಾಸ್ತಿಯವರಿಗೆ ಸಲ್ಲುತ್ತದೆ. ಕನ್ನಡ ಸಣ್ಣಕಥೆಗೆ ಒಂದು ಸ್ವರೂಪವನ್ನು ತಂದುಕೊಟ್ಟು, ಅದನ್ನೊಂದು ಗಂಭೀರ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನು ಅದಕ್ಕೆ ಹದಗೊಳಿಸಿದವರು. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ಮಾಸ್ತಿಯವರನ್ನು **‘ಸಣ್ಣಕತೆಗಳ ಜನಕ’** ಎಂದು ಕರೆಯಲಾಗುತ್ತದೆ.

ಒಂದು ವಸ್ತು, ಘಟನೆಯನ್ನು ಇಟ್ಟುಕೊಂಡು ನಾಲ್ಕಾರು ಪಾತ್ರಗಳ ಮೂಲಕ ಪರಿಣಾಮಕಾರಿಯಾಗಿ ಮೂಡಿಬರುವ ಕತೆಯ ಕಲಾತ್ಮಕತೆ ತುಂಬ ಕುಸುರಿನಿಂದ ಕೂಡಿದ್ದಾಗಿರುತ್ತದೆ.ಸಣ್ಣಕತೆ ಘಟನೆ ಮತ್ತು ಪಾತ್ರ ಪ್ರಧಾನವಾದದ್ದು ಎಂದು ಹೇಳಬಹುದು.

“ಕಥೆಯ ವಸ್ತು, ಅಲ್ಲಿನ ಪಾತ್ರ ರಚನೆ, ಅದರಲ್ಲಿನ ಆವರಣ ಎಲ್ಲವೂ ಒಂದೇ ಎಂದು ಗುರಿಯನ್ನು ಮುಟ್ಟುವಂತೆ ಪರಿಪೋಷಕವಾಗಿದ್ದು ಓದುಗನಲ್ಲಿ ಒಂದೇ ಒಂದು ಪರಿಣಾಮವನ್ನು ಮೂಡುವಂತಿದ್ದರೆ ಅದು ಸಣ್ಣಕತೆ ಎನಿಸಿಕೊಳ್ಳುವುದು” ಎಂಬುದು ಕೆ. ಗೋಪಾಲಕೃಷ್ಣ ಅವರ ಅಭಿಪ್ರಾಯವಾಗಿದೆ..

“ಸಣ್ಣಕಥೆಯ ಅಂತಃಶಕ್ತಿಯನ್ನು ಇಡಿಯಾದ ಹೂವಿನಲ್ಲಿ ನೋಟವಿಟ್ಟು, ಬಿಡಿಯಾದ ಎಸಳುಗಳನ್ನು ಬಿಡಿಸಿ ತೋರುವುದರಲ್ಲಿ ಅದರ ಕೌಶಲ್ಯವಿದೆ, ಘನತೆಯಿದೆ” ಎಂಬುದು ರಂ.ಶ್ರೀ. ಮುಗಳಿಯವರ ವ್ಯಾಖ್ಯಾನವಾಗಿದೆ.

“ಸಣ್ಣಕತೆ ಎಂಬುದು ಒಂದು ರಸಬಿಂಬ ಅಥವಾ ರಸದ ಗಟ್ಟಿ. ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ. ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತಿಸ್ವಲ್ಪ. ತೋರಿಸುವ ಸತ್ಯ ಅದ್ಭುತ. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ, ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಚತುರ ಕ್ರಿಯೆ ಅದರದು. ಸಣ್ಣ ಕಥೆಯಲ್ಲಿ ಭವದ ಹಿರಿಮೆ ಇರಬೇಕು ಭಾವದ ನಿರೂಪಣೆ ಸುಂದರವಾಗಿರಬೇಕು” ಎಂದು ಕೃಷ್ಣಮೂರ್ತಿ ಪುರಾಣಿಕರು ಅಭಿಪ್ರಾಯಪಡುತ್ತಾರೆ.

“ಸಣ್ಣಕಥೆಯ ಒಂದೇ ಪಾತ್ರ, ಒಂದೇ ಘಟನೆ, ಒಂದೇ ಭಾವನೆ ಅಥವಾ ಒಂದೇ ಪ್ರಸಂಗದಿಂದ ಉದ್ಭುತವಾದ ಅನೇಕ ಭಾವನೆಗಳನ್ನು ಕುರಿತು ಹೇಳಲ್ಪಟ್ಟಿರುತ್ತದೆ” ಎಂದು ಮ್ಯಾಥೂಸ್‌ನ ಅಭಿಪ್ರಾಯವಾಗಿದೆ.

ಚನ್ನಣ್ಣ ವಾಲೀಕಾರ ಅವರು “ಒಂದು ಘಟನೆ ಇಲ್ಲವೆ ಸನ್ನಿವೇಶದ ಸುತ್ತ ಬದುಕಿನ ವಿವರ ನೀಡುವುದು ಸಣ್ಣಕಥೆಯಾಗುವುದು” ಎಂದು ಜೀವನದ ಪ್ರತಿಬಿಂಬದ ಸ್ವರೂಪವನ್ನು ವಿಸ್ತರಿಸುವದಾಗಿದೆ ಎನ್ನುತ್ತಾರೆ.

“ಸಣ್ಣಕಥೆಯೆಂದರೆ ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆ ಪರಿಣಾಮಕಾರಿಯಾಗುವಂತೆ ತೀರ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು” ಎಂಬ ಮಿರ್ಜಿ ಅಣ್ಣಾರಾಯರ ಈ ಮಾತು ಸಣ್ಣ ಕಥೆಯನ್ನು ಅಡಿಯಿಂದ ಮುಡಿಯವರೆಗೆ ಅಳತೆ ಮಾಡಿ ಹೇಳಿದಂತಿದೆ

ಸಣ್ಣಕತೆ ಎನಿಸಿಕೊಳ್ಳಬೇಕಾದರೆ ಈ ಕೆಳಗಿನ ಲಕ್ಷಣಗಳು ಇರಬೇಕು.

- ಸಂಕ್ಷಿಪ್ತತೆ ಸಣ್ಣಕತೆಯ ಜೀವಾಳ.
- ವಾಸ್ತವ ಮತ್ತು ಕಲ್ಪನೆಗಳ ಸಮ್ಮಿಶ್ರ ಸ್ವಾರಸ್ಯಕರ ನಿರೂಪಣೆ.
- ಒಂದು ನಿರ್ದಿಷ್ಟ ವಸ್ತುವನ್ನು ಕುರಿತದ್ದಾಗಿರಬೇಕು.
- ಕಲಾತ್ಮಕತೆಯನ್ನು ಮೈಗೂಡಿಸಿಕೊಂಡಿರಬೇಕು.
- ಒಂದು ನಿರ್ದಿಷ್ಟ ಘಟನೆಯ ನಿರೂಪಣೆಯಾಗಿರಬೇಕು.
- ಘಟನೆಯ ಸುತ್ತಲೂ ಭಾವನೆಗಳ ಪದರು ಬಿಟ್ಟುಕೊಳ್ಳುತ್ತವೆ.
- ಪಾತ್ರಗಳು ಕಡಿಮೆಯಿರಬೇಕು.
- ಒಂದೇ ವಿಧವಾದ ತಂತ್ರ ಕಥೆಯುದ್ದಕ್ಕೂ ಸಾಗಿಬರಬೇಕು
- ಅದ್ಭುತ–ರಮ್ಯ ಅನುಭವ ನೀಡಬೇಕು.
- ಸಾಂದ್ರವೂ, ಸಂಕ್ಷಿಪ್ತವೂ, ಕ್ಷಿಪ್ರವೂ ಆದ ಸಂವಹನಶೀಲ ಬರವಣಿಗೆಯಾಗಿದೆ.
- ಪ್ರಾದೇಶಿಕ ಭಾಷೆಯನ್ನು ಒಳಗೊಂಡಿರಬೇಕು.
- ಪಾತ್ರಗಳ ಸಂಬಂಧ ನೇರವಾಗಿದ್ದರೆ ಹೆಚ್ಚು ಅರ್ಥಪೂರ್ಣ.
- ಕಥೆ ಜೀವನದ ನಿರಂತರ ಪ್ರವಾಹಕ್ಕೊಂದು ಚೌಕಟ್ಟನ್ನು ಹಾಕಿಕೊಡುತ್ತದೆ.
- ಓದುಗನನ್ನು ಗೊಂದಲದಲ್ಲಿ ಮುಳುಗಿಸುವಂತಿರಬಾರದು.
- ಕಥೆಯ ಅಂತ್ಯದವರೆಗೂ ಓದುಗನಲ್ಲಿ ಕುತೂಹಲ ಕೆರಳಿಸುವಂತಿರಬೇಕು.

ಹಾಗೆ ನೋಡಿದರೆ ಪ್ರತಿಯೊಂದು ಕಥೆಯಲ್ಲೂ ಈ ಎಲ್ಲಾ ಲಕ್ಷಣಗಳು ಇರಬೇಕೆಂಬ ನಿಯಮವೇನೂ ಇಲ್ಲ. ಬರಹಗಾರನ ದೃಷ್ಟಿಕೋಣಕ್ಕೆ ತಕ್ಕಂತೆ ಹೆಚ್ಚು ಕಡಿಮೆಯಾಗುವುದು ಸಹಜ. ಒಟ್ಟಿನಲ್ಲಿ ಪರಸ್ಪರ ಸಂಬಂಧವನ್ನು ಹೊಂದಿರುವ ಮನುಷ್ಯ ಜೀವನ ಸೂತ್ರದ ಆಧಾರದ ಮೇಲೆ ಕಲ್ಪಿತವಾಗಿರುವ ಅನುಭವವೇದ್ಯ ನಿರೂಪಣೆಯನ್ನು ಸಣ್ಣಕಥೆ ಎನ್ನಬಹುದು. ಸಮಾಜದಲ್ಲಿನ ಏಳು–ಬೀಳುಗಳು, ಜನರ ಬದುಕು–ಬವಣೆಗಳು, ನೋವು–ನಲಿವುಗಳು, ಕ್ರೌರ್ಯ–ಶಾಂತಿಯ ನಡೆ ಹಾಗೂ ಅದರ ಪರಿಣಾಮಗಳು, ಮಾನವೀಯ ಮೌಲ್ಯಗಳು ಎಲ್ಲವೂ ಸಣ್ಣಕಥೆಗೆ ವಸ್ತುಗಳಾಗಿವೆ.

ಕನ್ನಡ ಸಾಹಿತ್ಯದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಚದುರಂಗ, ಅನುಪಮಾ ನಿರಂಜನ, ವೈದೇಹಿ, ಯಶವಂತ ಚಿತ್ತಾಲ, ಪೂ.ಚಂ.ತೇಜಸ್ವಿ, ಅಮರೇಶ ನುಗಡೋಣಿ, ಸಾರಾ ಅಬೂಬಕ್ಕರ್ ಮೊದಲಾದವರು ಸಣ್ಣಕಥಾ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಪ್ರಸ್ತುತ 'ಯುದ್ಧ' ಎಂಬ ಸಣ್ಣಕತೆಯನ್ನು ಸಾರಾ ಅಬೂಬಕ್ಕರವರ 'ಚಪ್ಪಲಿಗಳು'ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಕವಿ – ಕಾವ್ಯ ಪರಿಚಯ

**ಸಾರಾ ಅಬೂಬಕ್ಕರ್**



ಶ್ರೀಮತಿ **ಸಾರಾ ಅಬೂಬಕ್ಕರ್** ಅವರು 30 ಜೂನ್ **1936** ರಂದು **ಕಾಸರಗೋಡು** ಎಂಬ ಊರಿನಲ್ಲಿ ಜನಿಸಿದರು. ಇವರು ಇಂದು ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿದ್ದಾರೆ. **ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ** ಇತ್ಯಾದಿ ಪ್ರಮುಖ **ಕಾದಂಬರಿಗಳು,** ಹಾಗೂ **ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ** ಮುಂತಾದ ಕಥಾ **ಸಂಕಲನ**ಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ **'ನೃಪತುಂಗ ಪ್ರಶಸ್ತಿ'** ಲಭಿಸಿದೆ.

## ಪಾಠದ ಒಳನೋಟ ಮತ್ತು ಆಶಯ

'ಯುದ್ಧ' ಇತಿಹಾಸದ ಉದ್ದಕ್ಕೂ ಇರುವಂತಹದ್ದೇ ಆಗಿದೆ. ಸಾಮ್ರಾಜ್ಯ ವಿಸ್ತರಣೆ, ಲೋಭ, ಶಕ್ತಿಯ ಪ್ರದರ್ಶನ, ಕೌಟುಂಬಿಕ ಕಲಹಗಳು, ದ್ವೇಷ ಸಾಧನೆ ಮುಂತಾದವು ಯುದ್ಧಕ್ಕೆ ಕಾರಣವಾಗುತ್ತವೆ.

(ದ್ವೇಷಸಾಧನೆಯಿಂದ ಕೌರವರಿಗೂ ಪಾಂಡವರಿಗೂ ಯುದ್ಧವಾಯಿತು. ಸಾಮ್ಯಾಜ್ಯ ವಿಸ್ತರಣೆ ಮಾಡಲು ಅಲೆಕ್ಸಾಂಡರ್ ಯುದ್ಧ ಮಾಡಿದನು. ಭಾರತದ ಸಂಪತ್ತಿನ ಲೋಭದಿಂದ ಘಜ್ನಿ ಮಹಮ್ಮದ್ ಭಾರತದ ಮೇಲೆ ದಂಡೆತ್ತಿಬಂದ , ಶಕ್ತಿಯ ಪ್ರದರ್ಶನ ಮಾಡಲು ಭರತ ಷಟ್ಖಂಡಲಗಳನ್ನು ಗೆದ್ದು ಬಂದನು. ಕೌಟುಂಬಿಕ ಕಲಹದಿಂದ ಎಷ್ಟೋ ರಾಜಮನೆತನಗಳು ನಾಶವಾಗಿವೆ )

ಈ ಯುದ್ಧದ ಭೀಕರತೆಯು ಧರ್ಮ, ದೇಶಗಳ ಭೇದವಿಲ್ಲದೆ ಭಾಗಿಯಾದ ಸೈನಿಕರಿಗೂ ಅವರ ಕುಟುಂಬ ವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಸಂಕಟಕ್ಕೆ ಗಡಿಯಿಲ್ಲ–ಧರ್ಮವಿಲ್ಲ. ಆದ್ದರಿಂದ ಯುದ್ಧದಲ್ಲಿ ನೊಂದವರು ಧರ್ಮಭಿನ್ನತೆ, ದೇಶಭಿನ್ನತೆ, ವೈರಿ–ಮಿತ್ರ ಎಂಬುದನ್ನೆಲ್ಲ ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ, ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡೆವಳಿಕೆಗಳನ್ನು ಬೆಳೆಸಿಕೊಳ್ಳಬೇಕು.

ಯಾವುದೋ ಎರಡು ದೇಶಗಳ ನಡುವೆ ಯುದ್ಧವಾಗುತ್ತಿದೆ. ದೇಶದ ಗಡಿ ಭಾಗದಲ್ಲಿ ಸಮುದ್ರದ ಮೇಲಿನ ಆಕಾಶದಲ್ಲಿ ಹಾರುತ್ತಿದ್ದ ಯುದ್ಧ ವಿಮಾನದ ಮೇಲೆ ವೈರಿಗಳ ವೈಮಾನಿಕ ದಾಳಿಯಿಂದಾಗಿ ವಿಮಾನವು ನುಚ್ಚುನೂರಾಗಿ ಸಮುದ್ರದ ಮೇಲೆ ಬಿದ್ದಿತು. ಅದರಲ್ಲಿದ್ದ ರಾಹಿಲ್ ಎಂಬ ವೈದ್ಯ ಸೈನಿಕನೊಬ್ಬನಿಗೆ ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಕಷ್ಟಪಟ್ಟು ನೀರಿನಲ್ಲಿ ಈಜಿ ದಡ ಸೇರುತ್ತಾನೆ. ಅಲ್ಲಿಯೇ ಇದ್ದ ಅನ್ಯ ದೇಶದವರ ಕುಟುಂಬದಲ್ಲಿ ಮಹಿಳೆಗೆ ಉಂಟಾಗಿದ್ದ ಸಂಕಷ್ಟವನ್ನು ತಾನು ನೋವಿನಲ್ಲಿದ್ದರೂ ಪರಿಹರಿಸುತ್ತಾನೆ. ಅಂತೆಯೇ ಆ ಕುಟುಂಬವು ಅವನನ್ನು ವೈರಿ ಪಡೆಯವನೆಂದು ಪರಿಗಣಿಸದೆ ತನ್ನ ದೇಶದ ಸೈನಿಕರಿಂದ ದಾಳಿಗೆ ತುತ್ತಾಗದಂತೆ ರಕ್ಷಿಸುವುದನ್ನು ಇಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಜನಸಾಮಾನ್ಯರಲ್ಲಿ ಯುದ್ಧದ ಬಗೆಗಿನ ತಿರಸ್ಕಾರವನ್ನು, ಸಂಕಷ್ಟದಲ್ಲಿ ವೈರಿ–ಮಿತ್ರ ಎಂದು ನೋಡದೆ ಪರಸ್ಪರ ಸಹಕಾರದೊಂದಿಗೆ ಮಾನವೀಯ ಮೌಲ್ಯವನ್ನು ಎತ್ತಿಹಿಡಿಯುವುದನ್ನು ಈ ಪಾಠದಲ್ಲಿ ನೋಡಬಹುದಾಗಿದೆ.

**ಪಾಠದಿಂದ ಹೊರಹೊಮ್ಮುವ ಮೌಲ್ಯಗಳು :**

1) ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳುವುದು.

2) ಯುದ್ಧದಿಂದ ಸರ್ವರಿಗೂ ಸಂಕಷ್ಟ ಆದ್ದರಿಂದ ಯುದ್ಧ ತಿರಸ್ಕರಿಸಿ ಶಾಂತಿ ಮನೋಭಾವವನ್ನು ಬೆಳೆಸಿಕೊಳ್ಳುವುದು.

3) ವೈರಿ – ಮಿತ್ರರೆನ್ನದೆ ಪರಸ್ಪರ ಸಹಕಾರ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.

## ಪಾಠದ ಸಂಕ್ಷಿಪ್ತ ವಿವರಣೆ

ರಾತ್ರಿಯ ಸಮಯ ಆಗಿದೆ. ಸುತ್ತಲೂ ಕತ್ತಲು ಆವರಿಸಿಕೊಂಡಿದೆ. ಎರಡು ದೇಶಗಳ ನಡುವೆ ಯುದ್ಧ ನಡೆಯುತ್ತಿದೆ. ದೇಶದ ಗಡಿ ಭಾಗದ ಸಮುದ್ರದ ಮೇಲಿನ ಆಕಾಶದಲ್ಲಿ ಯುದ್ಧ ವಿಮಾನವೊಂದು ಹಾರಾಡುತ್ತಿದೆ. ಆ ವಿಮಾನದಲ್ಲಿ ಒಬ್ಬ ಪೈಲಟ್(ವಿಮಾನ ಚಾಲಕ) ಹಾಗೂ ಇನ್ನೊಬ್ಬ **ರಾಹಿಲ್ ಎಂಬ ವೈದ್ಯಸೈನಿಕ** ಇದ್ದಾನೆ. ವಿಮಾನದಲ್ಲಿದ್ದ ಪೈಲಟ್ ಡಾಕ್ಟರ್ ರಾಹಿಲ್‌ಗೆ ಹೀಗೆ ಹೇಳುತ್ತಾನೆ **"ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಭೂಪ್ರದೇಶದೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?"** ಎಂದಾಗ ಡಾಕ್ಟರ್ ರಾಹಿಲ್ ಹೌದು "ಇದು ನಮ್ಮ ಪ್ರದೇಶವೇ, ವೈರಿಗಳ ಪ್ರದೇಶವೇ ಎಂದು ಕೂಡಾ ಗೊತ್ತಾಗ್ತಾ ಇಲ್ಲ. ಹೇಗಾದರೂ ನೆಲ ಮುಟ್ಟಿದ್ದರೆ ಸಾಕಾಗಿತ್ತು" ಎಂದು ಯೋಚಿಸುತ್ತ ತನ್ನ ಕೈಯಲ್ಲಿದ್ದ **ಔಷಧ ಮತ್ತು ತುರ್ತು ಪರಿಸ್ಥಿತಿಗೆ ನಿರ್ವಹಣೆಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಗೆ**ಯನ್ನು ಇನ್ನಷ್ಟು ಭದ್ರವಾಗಿ ಹಿಡಿದುಕೊಂಡನು.

ಇದೇ ಸಂದರ್ಭದಲ್ಲಿ ರಾಹಿಲ್ ಇದ್ದ ಆ ವಿಮಾನದ ಮೇಲೆ ವೈರಿ ದೇಶದವರು ವೈಮಾನಿಕ ದಾಳಿ ಮಾಡಿದರು. ವಿಮಾನ ಭಯಂಕರ ಶಬ್ದದೊಡನೆ ಸ್ಫೋಟಿಸಿ ನೂರಾರು ಹೋಳು(ಚೂರು)ಗಳಾಗಿ ಸಮುದ್ರದ ಮೇಲೆ ಚೆದರಿ(ಚೆಲ್ಲಾಪಿಲ್ಲಿ)ಬಿತ್ತು. ರಾಹಿಲ್‌ನ ಕಾಲಿಗೆ ತೀವ್ರ ಪೆಟ್ಟಾಗಿ ಸಮುದ್ರದ ಆಳಕ್ಕೆ ಬಿದ್ದನು. ನೀರಿನಾಳದಲ್ಲಿ ಎಚ್ಚರಗೊಂಡ ಡಾಕ್ಟರ್ ರಾಹಿಲ್ ಕಷ್ಟಪಟ್ಟು ಮೇಲೆ ಬಂದನು. ಒಂದು ಕಾಲನ್ನು ಅಲುಗಾಡಿಸಲು ಆಗದಿದ್ದರೂ ಹೇಗೋ ಈಜ ತೊಡಗಿದನು. ತಾನು ಸಾಗರದ ತೀರ(ದಂಡೆ,ದಡ,)ದ ಕಡೆಗೆ ಹೋಗುತ್ತಿದ್ದೇನೆಯೇ ಅಥವಾ ಸಾಗರದ ಒಳಗಡೆಗೆ ಹೋಗುತ್ತಿದ್ದೇನೆಯೇ ಎಂಬುದು ಆತನಿಗೆ ಗೊತ್ತಾಗುತ್ತಿರಲಿಲ್ಲ. ಸೈನಿಕ ಉಡುಪಿನಲ್ಲಿ ಈಜಲು ಬಹಳ ತೊಂದರೆಯಾಗುತ್ತಿತ್ತು. ಬಹಳ ಹೊತ್ತು ಈಜಿ ಕೈ ಸೋತು ಇನ್ನೇನು ಸಾಗರದಲ್ಲಿ ಮುಳುಗಿ ಹೋಗುತ್ತೇನೆ ಎಂದು ನಿರಾಶೆಯಿಂದ ಕೊನೆಯ ಬಾರಿ ತಲೆ ಎತ್ತಿದಾಗ ಕಣ್ಣು ಕೋರೈಸುವ ಮಿಂಚೊಂದು ಮಿಂಚಿತು. ಸಮೀಪದಲ್ಲೇ ಸಾಗರ ತೀರವಿರುವುದು ರಾಹಿಲ್‌ನ ಕಣ್ಣಿಗೆ ಬಿತ್ತು.

ಸಾಗರ ತೀರ ಕಣ್ಣಿಗೆ ಬಿದ್ದೊಡನೆ ರಾಹಿಲನ ದೇಹದಲ್ಲಿ ಹೊಸರಕ್ತ ಸಂಚಾರವಾದಂತಾಯಿತು. ನೀರನ್ನು ಹಿಂದೆ ತಳ್ಳುತ್ತಾ ದಡ ಸೇರಿಯಾಯಿತು. ಆದರೆ ಈ ನೆಲ ಯಾರಿಗೆ ಸೇರಿದ್ದು? ತನ್ನನ್ನು ಹಿಡಿದು ಕೊಲ್ಲುವವರಿಗೋ(ವೈರಿ) ಅಥವಾ ತನ್ನನ್ನು ಬದುಕಿಸಿ ರಕ್ಷಣೆ ನೀಡುವವರಿಗೋ? ಎಂದು ಯೋಚಿಸಿದನು. ಮಿಂಚು ಮತ್ತೊಮ್ಮೆ ಮಿಂಚಿತು. ಆ ಬೆಳಕಿನಲ್ಲಿ ಒಂಟಿ ಮನೆಯೊಂದು ಕಣ್ಣಿಗೆ ಬಿತ್ತು.

ಧಾರಾಕಾರವಾಗಿ ಸುರಿಯುತ್ತಿರುವ ಈ ಮಳೆಯಿಂದ ಮೊದಲು ರಕ್ಷಣೆ ಪಡೆಯಬೇಕು. ಮುರಿದುಹೋದ ಕಾಲಿನ ಆರೈಕೆಯಾಗಬೇಕು ಎಂದು ಯೋಚಿಸುತ್ತ ಕತ್ತಲಲ್ಲಿ ಆ ಒಂಟಿ ಮನೆಯ ಕಡೆ ತೆವಳುತ್ತಿದ್ದನು. ಅಷ್ಟರಲ್ಲಿ ಆ ಮನೆಯ ಒಳಗಿನಿಂದ ಮಹಿಳೆಯ ಅಯ್ಯೋ ,ಅಮ್ಮಾ ,ಯಾ ಅಲ್ಲಾ ... ಎಂಬ ಆರ್ತನಾದ ರಾಹಿನಿಗೆ ಕೇಳಿಸಿತು. ಆಗ ರಾಹಿನ ಮನದಲ್ಲಿ **"ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ. ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು ?ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?** ಎಂಬ ಪ್ರಶ್ನೆಗಳು ಮೂಡಿದವು.

ರಾಹಿಲನು ತೆವಳುತ್ತ ಮನೆಯ ಬಳಿ ಬಂದಾಗ ಮುದುಕಿ ಸಾಂತ್ವನ ಮಾತುಗಳು ಕೇಳಿ ಬಂತು. ''ಏನು ಮಾಡಲಿ ಮಗಳೇ? ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ? ಒಮ್ಮೆ ಬೆಳಗಾಗಿದ್ದರೆ ಸಾಕಾಗಿತ್ತು.'' ರಾಹಿಲ್ ತೆವಳುತ್ತಾ ಹೇಗೋ ಮೆಟ್ಟಲು ಹತ್ತಿ ಬಾಗಿಲು ಬಡಿದು ''ಅಮ್ಮಾ, ಬಾಗಿಲು ತೆಗಿಯಿರಿ...'' ಎಂದನು. ''ಹಾಂ... ಯಾರಪ್ಪಾ ಅದೂ? ಈ ಮಳೆಯಲ್ಲಿ, ಈ ಕತ್ತಲ ಗುಹೆಯಲ್ಲಿ...ಯಾರೂ?'' ಎಂದು ಮುದುಕಿ ಕೇಳಿದಳು. ಆಗ ರಾಹಿಲ್ **''ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ. ಪ್ಲೀಸ್...''** ಎಂದು ದಯನೀಯವಾಗಿ ಅಂಗಲಾಚಿದನು.ಆಗ ಮುದುಕಿಯು ''ಗಾಯ? ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ?'' ಎಂದು ಗೊಣಗಿಕೊಳ್ಳುತ್ತಾ ಬಾಗಿಲು ತೆರೆದಳು. ರಾಹಿಲನು ತೆವಳುತ್ತಲೇ ಆತುರದಿಂದ ಮನೆಯೊಳಗೆ ನುಗ್ಗಿ ಬಾಗಿಲಿಕ್ಕಿಕೊಂಡು ಮನೆಯಾಕೆಯನ್ನು ದಿಟ್ಟಿಸಿ ನೋಡಿದನು. ಆಗ ಮುದುಕಿ ದೀಪವನ್ನು ರಾಹಿಲನ ಸಮೀಪ ತಂದು ಆತನ ಮುಖವನ್ನು ಪರೀಕ್ಷಿಸುವಂತೆ ದಿಟ್ಟಿಸಿ ನೋಡಿದಳು. ''ಯಾರಪ್ಪಾ ನೀನು? ನಮ್ಮ ಕಡೆಯವನು ತಾನೇ?'' ಎಂದಳು.ಆಗ ರಾಹಿಲ್ ನು **''ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು''** ಎಂದು ಗಂಭೀರವಾಗಿ ನುಡಿದನು.

''ಯಾ ಅಲ್ಲಾ...ಉಮ್ಮಾ...ನನ್ನನ್ನು ರಕ್ಷಿಸಿ. ನಾನಿನ್ನು ತಾಳಲಾರೆ...'' ಎಂದು ಒಳಗಿಂದ ಮತ್ತೊಮ್ಮೆ ಆರ್ತನಾದ ಕೇಳಿತು. ಆಗ ರಾಹಿಲ್ ''ಯಾರಮ್ಮಾ ಅದು? ಏನಾಗಿದೆ?'' ಎಂದು ಕೇಳಿದನು. ಮುದುಕಿ

''ಏನು ಹೇಳಲಪ್ಪ? ನನ್ನ ಸೊಸೆ ಹೆರಿಗೆಯ ಬೇನೆ ತಿನ್ನುತ್ತಿದ್ದಾಳೆ. ಸಂಜೆಯಿಂದಲೇ ನೋವು ಪ್ರಾರಂಭವಾಗಿದೆ. ಡಾಕ್ಟರನ್ನು ಅಥವಾ ಸೂಲಗಿತ್ತಿಯನ್ನಾದರೂ ಕರೆಯೋಣವೆಂದರೆ ಈ ಬಾಂಬುಗಳು, ಬ್ಲಾಕ್ ಔಟ್. ಯಾರಿಗೆ ಬೇಕಾಗಿದೆ ಈ ಯುದ್ಧ? ನನ್ನ ಹುಡುಗಿಗೊಮ್ಮೆ ಹೆರಿಗೆಯಾದರೆ ಸಾಕಾಗಿತ್ತು.'' ಎಂದಾಗ ರಾಹಿಲ್ ನು ''ಅಮ್ಮಾ, ನಾನೋರ್ವ ಡಾಕ್ಟರ್. ನಾನು ಆಕೆಯನ್ನು ಪರೀಕ್ಷಿಸಲೇ?'' ಎಂದು ಮುದುಕಿಗೆ ಕೇಳಿದನು.

''ಆಂ... ಹೌದಾ?'' ''ಅಲ್ಲಾಹುವೇ ನಿನ್ನನ್ನು ನಮ್ಮ ಬಳಿಗೆ ಕಳಿಸಿದನೆಂದು ತೋರುತ್ತದೆ. ಆದರೆ... ನೀನು ತುಂಬಾ ಬಳಲಿದ್ದಿ, ನೀರಲ್ಲಿ ಒದ್ದೆಯಾಗಿದ್ದಿ. ಇರು ನನ್ನ ಮಗನ ಬಟ್ಟೆ ತಂದು ಕೊಡುವೆ'' ಎನ್ನುತ್ತಾ ಒಳಹೋಗಿ ಆತನಿಗೆ ತನ್ನ ಮಗನ ಬಟ್ಟೆಗಳನ್ನು ತಂದಿತ್ತಳು. ಆತನು ಕುಳಿತಲ್ಲೇ ಬಟ್ಟೆ ಬದಲಾಯಿಸಿಕೊಂಡನು.

ನಂತರ ಮುದುಕಿ ದೀಪ ಹಿಡಿದುಕೊಂಡು ಒಳಗಿನ ಮಲಗುವ ಕೋಣೆಗೆ ಹೋದಳು. ಆತನು ತೆವಳುತ್ತಾ ಕಾಲೆಳೆಯುತ್ತಾ ಮುದುಕಿಯನ್ನು ಹಿಂಬಾಲಿಸಿದನು. ಅಲ್ಲಿನ ಮಂದ ಬೆಳಕಿನಲ್ಲಿ ನರಳುತ್ತಿದ್ದಾಕೆಯನ್ನು ದಿಟ್ಟಿಸಿ ನೋಡಿ **''ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ''** ಎಂದು ಮುದುಕಿಯನ್ನು ಕಳುಹಿಸಿ ಮಲಗಿದ್ದಾಕೆಯನ್ನು ಪರೀಕ್ಷಿಸತೊಡಗಿದನು . ಬಹಳ ಹೊತ್ತಿನ ಪ್ರಯತ್ನದ ಬಳಿಕ ಆತನು ಮಗುವನ್ನೇನೋ ಹೊರ ತೆಗೆದನು. ಆದರೆ ಅದು ನಿರ್ಜೀವವಾಗಿತ್ತು. ನಿರ್ಜೀವವಾಗಿರುವ ಮಗುವನ್ನು ನೋಡಿ ನಿರಾಶೆಯಿಂದ ಆ ಮುದುಕಿ **''ಇಷ್ಟು ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?'' ಎಂದು** ಹೇಳುತ್ತಾ ಎದೆ ಬಡಿದುಕೊಂಡು ಅಳುತ್ತಾ ಸೊಸೆಗೆ ಸ್ನಾನ ಮಾಡಿಸಿ ಒಂದೆಡೆ ಮಲಗಿಸಿದಳು. ನಿರ್ಜೀವ ಮಗುವಿಗೂ ಸ್ನಾನ ಮಾಡಿಸಿ ಬಟ್ಟೆ ಸುತ್ತಿದಳು.

ರಾಹಿಲನು ಕೋಣೆಯಿಂದ ಹೊರಬಂದು ತನ್ನ ಕಾಲಿನ ಆರೈಕೆ ಮಾಡಿಕೊಂಡ ಬಳಿಕ, ''ಅಮ್ಮಾ, ನಾನು ಬರುವುದು ಕೊಂಚ ತಡವಾಗಿದ್ದರೂ ನಿಮ್ಮ ಸೊಸೆಯೂ ಉಳಿಯುತ್ತಿರಲಿಲ್ಲ. ಹೇಗೋ ಸೊಸೆಯನ್ನು ಬದುಕಿಸಿದೆ. ಈಗ ನನಗೆ ತುಂಬಾ ಸುಸ್ತು. ಮಲಗಲು ಒಂದಷ್ಟು ಜಾಗ ಕೊಡಿ'' ಎಂದನು.

ಆಗ ಹೊರಗಡೆಯಿಂದ ''ಬಾಗಿಲು ತೆಗೆಯಿರಿ!'' ಎಂದು ಶಬ್ದ ಬಂದಿತು. ರಾಹಿಲ್ ತೆಗೆಯಬೇಡಿ ಎಂದು ಸನ್ನೆ ಮಾಡಿದನು. ಈತ ವೈರಿ ದೇಶದ ಕಡೆಯವನ್ನು ಎಂದು ತಿಳಿದ ಮುದುಕಿಯ ಕಣ್ಣುಗಳು ರೋಷದಿಂದ ಕೆರಳಿದವು. ಆದರೂ ಮುದುಕಿ ರಾಹಿನ ಮುಖ ನೋಡುತ್ತಾ '' ಓ...ಈ ಕಣ್ಣುಗಳು **ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?''** ಎಂದು ತನಗೆ ಮಾಡಿದ ಸಹಾಯವನ್ನು ನೆನೆದಳು. ಈ ಬಾರಿ ಗರ್ಜನೆಯಾಗಿ ಬಂತು ಹೊರಗಿನ ಧ್ವನಿ. ನಿಶ್ಶಬ್ದವಾಗಿ ರಾಹಿಲನನ್ನು ಸೊಸೆ ಮಲಗಿದ ಕೋಣೆಗೆ ಕಳಿಸಿ ಮಂಚದಡಿಯನ್ನು ತೋರಿಸಿದಳು. ಬಟ್ಟೆ ಸುತ್ತಿದ ನಿರ್ಜೀವ ಶಿಶುವನ್ನು ಬಾಗಿಲ ಬಳಿ ಮಲಗಿಸಿ ಹೊರಬಂದು ಬಾಗಿಲು ತೆರೆದಳು. ಈ ಕಡೆ ಯಾರಾದರೂ ಗಾಯಗೊಂಡ ಸೈನಿಕರು ಬಂದಿದ್ದಾರೆಯೇ?'' ಎಂದು ಕೇಳುತ್ತಾ ಒಳನುಗ್ಗಿದರು.

''ಇಲ್ಲವಲ್ಲಾ?'' ಮುದುಕಿ ನುಡಿದಳು. ''ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ.''ಎಂದು ಒಬ್ಬ ಅಪ್ಪಣೆ ಕೊಟ್ಟ. ಉಳಿದವರು ಒಳಹೊಕ್ಕರು. ಮುದುಕಿ ಅಳುತ್ತಾ, ''ಹೂಂ...ನೋಡಿ; **ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!** ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲವಲ್ಲ? ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ? ಅದನ್ನಾದರೂ ಹೇಳಿರಲ್ಲ?'' ಎನ್ನುತ್ತಾ ಆ ನಿರ್ಜೀವ ಶಿಶುವಿನ ಬಳಿ ಕುಳಿತು ಮತ್ತೊಮ್ಮೆ ಎದೆ ಬಡಿದುಕೊಂಡು ಅಳತೊಡಗಿದಳು. ಬಂದವರು ಮಗುವಿನ ಮೃತದೇಹವನ್ನು ನೋಡಿ ನಿಶ್ಯಬ್ದವಾಗಿ ಹೊರನಡೆದರು.

ಬಳಿಕ ಮುದುಕಿ ರಾಹಿಲನನ್ನು ಹೊರಗೆ ಕರೆದು ಒಂದುಕೋಣೆ ತೋರಿಸಿ ''ಈ ರಾತ್ರಿಯನ್ನು ಈ ಕೋಣೆ ಯಲ್ಲಿ ಕಳೆಯಿರಿ. ನಾಳೆ ಬೇರೇನಾದರೂ ಏರ್ಪಾಟು ಮಾಡುವಾ'' ಎಂದಳು. ಒಂದೆರಡು ದಿನಗಳಲ್ಲಿ ಪರಸ್ಪರರಲ್ಲಿ ವಿಶ್ವಾಸ ಮೂಡಿತು. ಇಬ್ಬರೂ ಪರಸ್ಪರರಲ್ಲಿ ಸುಖ ದುಃಖಗಳನ್ನು ಹಂಚಿಕೊಂಡರು. ಮುದುಕಿಯೇ ಮೊದಲು ತನ್ನ ವಿಚಾರಗಳನ್ನು ಹಂಚಿಕೊಂಡಳು.

**"ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು.ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ !"** ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ಮುದುಕಿ ಮಾತನಾಡಿದಳು.

ಆಗ ರಾಹಿಲ್ ''ಆಗಲೂ ಯುದ್ಧವಾಗಿತ್ತಾ ಅಜ್ಜೀ?'' ಎಂದು ಕೇಳಿದನು. ಆಗ ಮುದುಕಿ ''ಹೂಂ...ಆಗ ಈ ಊರು ಆ ದೇಶದವರ ಕೈಯಲ್ಲಿತ್ತು. ಅವರ ಧರ್ಮ ಬೇರೆ ನಮ್ಮ ಧರ್ಮ ಬೇರೆ ಎಂಬ ಕಾರಣಕ್ಕೆ ಆಗ ಯುದ್ಧ ಮಾಡಿದರು. ಸಾವಿರಗಟ್ಟಲೆಯಲ್ಲಿ ಜನರು ಪ್ರಾಣ ತೆತ್ತ ಬಳಿಕ ಯುದ್ಧ ನಿಂತು ಈ ಊರು ಈ ದೇಶಕ್ಕೆ ಸೇರಿತು. ಊರೇನೋ ಕೈ ಬದಲಾಯಿಸಿತು. ಆದರೇನು? ನಮ್ಮ ಬದುಕಿನಲ್ಲೇನಾದರೂ ವ್ಯತ್ಯಾಸವಾಗಿದೆಯೇ? ನಾವು ಬೆವರಿಳಿಸಿ ದುಡಿದದ್ದನ್ನು ಈ ಜನರು ಹಲವು ಹೆಸರು ಹೇಳಿ, ಹಲವು ಕಾರಣ ನೀಡಿ ದೋಚಿಕೊಂಡು ಹೋಗುತ್ತಾರೆ. ದುಡಿದದ್ದನ್ನೇ ಕೊಂಡು ಹೋದರೆ ಹಾಳಾಗಲಿ ಎಂದು ಸುಮ್ಮನಿರಬಹುದಾಗಿತ್ತು. ಮನೆಯ ಮಕ್ಕಳನ್ನೂ ಯುದ್ಧಕ್ಕೆ ಕರೆದೊಯ್ಯುತ್ತಾರಲ್ಲಾ? ಇವರ ಮನೆ ಹಾಳಾಗ!'' ನೆಲಕ್ಕೆ ಕೈ ಬಡಿದು ಶಪಿಸಿದಳು ಮುದುಕಿ.

''ಈಗ ನಿಮ್ಮ ಮಗನೆಲ್ಲಿದ್ದಾನಮ್ಮಾ?'' ಎಂದು ರಾಹಿಲ್ ಮುದುಕಿಗೆ ಕೇಳಿದನು.

ಆಗ ಮುದುಕಿ **"ನನ್ನ ಮಗ ಯುದ್ಧಕ್ಕೆ ಹೋಗಿದ್ದಾನೆ ! ನನ್ನ ಮಗನೂ ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು. ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಎಂದು ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸುತ್ತ ಕೊನೆಯ ಮಾತನ್ನು ಹೇಳುವಾಗ ಮುದುಕಿಯ ಕಂಠ ಗದ್ಗದವಾಗಿ ಮುಂದೆ ಮಾತೇ ಹೊರಡಲಿಲ್ಲ.**

## ಪದಗಳ ಅರ್ಥ

ಕೋರೈಸುವ – ಕುಕ್ಕುವ(ಪ್ರಕಾಶಿಸುವ). ತೀರ – ತಟ(ದಟ).ಆರೈಕೆ – ರಕ್ಷಣೆ. ಆರ್ತನಾದ – ಕಷ್ಟಕ್ಕೆ ಸಿಕ್ಕಿದವರ ಕೂಗು. ಕಿವಿಗಡಚಿಕ್ಕು – ಕಿವಿಗೆ ಕರ್ಕಶವಾಗು. ಕ್ರೌರ್ಯ – ನಿರ್ದಯತೆ, ಕರುಣೆಯಿಲ್ಲದ. ಗ್ರೌಂಡ್ – ಭೂಪ್ರದೇಶ. ಅಂಗಲಾಚು – ಬೇಡು. ರೋದನ – ಅಳುವಿಕೆ. ಸಾಂತ್ವನ – ಸಮಾಧಾನಪಡಿಸು. ಸೂಲಗಿತ್ತಿ – ಹೆರಿಗೆಯ ಸಮಯದಲ್ಲಿ ಸಹಾಯ ಮಾಡುವವಳು. ಹಂಬಲ – ತೀವ್ರ ಆಸೆ. ಹತಾಶೆ – ನಿರಾಶೆ, ಆಶಾಭಂಗ.

**'ಬ್ಲಾಕ್ ಔಟ್' ನಿಯಮ** – ಯುದ್ಧಕಾಲದಲ್ಲಿ ರಾತ್ರಿವೇಳೆ ಶತ್ರು ಸೈನಿಕರು ವೈಮಾನಿಕ ದಾಳಿಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದು.

## ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ರಾಹಿಲನು ಯಾರು ?
   ರಾಹಿಲನು ಒಬ್ಬ **ವೈದ್ಯ ಸೈನಿಕ.**
2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?
   ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಬೇಕಾದ **ಔಷಧ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು** ಭದ್ರವಾಗಿ ಹಿಡಿದುಕೊಂಡಿದ್ದನು.
3. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?
   ಗಡಿ ಪ್ರದೇಶದಲ್ಲಿ **ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು** 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.
4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?
   ರಾಹಿಲನು ಮುದುಕಿಯ ಎದುರಿಗೆ **"ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ , ಸಂಕಷ್ಟಕ್ಕಿಡಾದ ಮನುಷ್ಯರ ಕಡೆಯವನು"** ಎಂದು ಗಂಭೀರವಾದ ಮಾತನ್ನು ನುಡಿದನು.
5. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ?
   **" ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯಮಾಡುವುದೇ ಯುದ್ಧದ ಪರಿ"** ಎಂಬುದು ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವಾಗಿದೆ.

## ಹೆಚ್ಚುವರಿ ಪ್ರಶ್ನೋತ್ತರಗಳು

6. ಬ್ಲಾಕ್ ಔಟ್ ನಿಯಮ ಎಂದರೇನು ?

ಯುದ್ಧಕಾಲದಲ್ಲಿ ರಾತ್ರಿವೇಳೆ ಶತ್ರು ಸೈನಿಕರು ವೈಮಾನಿಕ ದಾಳಿಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದನ್ನು **'ಬ್ಲಾಕ್ ಔಟ್ ನಿಯಮ'** ಎಂದು ಕರೆಯಲಾಗುತ್ತದೆ.

7. ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಏಕೆ ಕೆರಳಿದವು?

ತಮ್ಮ ಮನೆಗೆ ಬಂದಿರುವಾತ ತಮ್ಮವನಲ್ಲ, ತಮಗೆ ,ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಏಕೆ ಕೆರಳಿದವು?

8.ರಾಹಿಲನು ಹೆಂಗಸಿಗೆ ಏನೆಂದು ಅಂಗಲಾಚಿದನು ?

ರಾಹಿಲನು ಹೆಂಗಸಿಗೆ **"ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ. ಪ್ಲೀಸ್..."** ಎಂದು ಅಂಗಲಾಚಿದನು.

9.ಯಾರ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆ ಯಾಕೆ ಆಗುತ್ತದೆ ?

**ಯುದ್ಧದ** ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆ ಯಾಕೆ ಆಗುತ್ತದೆ.

10.ಮುದುಕಿ ತನ್ನ ಮಗ ಎಲ್ಲಿಗೆ ಹೋಗಿದ್ದಾನೆಂದು ರಾಹಿಲನಿಗೆ ತಿಳಿಸಿದಳು ?

ಮುದುಕಿ ತನ್ನ ಮಗ **ಯುದ್ಧಕ್ಕೆ** ಹೋಗಿದ್ದಾನೆಂದು ರಾಹಿಲನಿಗೆ ತಿಳಿಸಿದಳು.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?**

ಡಾಕ್ಟರ್‌ಗೆ ವಿಮಾನದ ಪೈಲಟ್ **" ಡಾಕ್ಟರ್ ! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಭೂಪ್ರದೇಶದೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗುತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣ ಎಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ "** ಎಂದು ಹೇಳಿದನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ **"ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ. ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು ?ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?** ಎಂಬ ಪ್ರಶ್ನೆಗಳು ಮೂಡಿದವು.

**3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

ಮುದುಕಿಯು ರಾಹಿಲನ ಬಳಿ **"ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟು ಇತ್ತು. ಈಗಲೂ ಇದೆ. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ !"** ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾಗಿವೆ.

**4. ನಿರ್ಜೀವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ **"ಇಷ್ಟು ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?"** ನಿರಾಶೆಯಿಂದ ಹೇಳಿದಳು.

## ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

**1. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?**

ರಾಹಿಲನು ಮುದುಕಿಗೆ ನಿಮ್ಮ ಮಗ ಈಗ ಎಲ್ಲಿದ್ದಾನೆಂದು ಕೇಳಿದಾಗ, ಮುದುಕಿಯು **"ನನ್ನ ಮಗ ಯುದ್ಧಕ್ಕೆ ಹೋಗಿದ್ದಾನೆ ! ನನ್ನ ಮಗ ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಅವನ ತಂದೆಯನ್ನು ಯುದ್ಧಕ್ಕೆ ಕರೆದುಕೊಂಡು ಹೋಗಿದ್ದರು. ಆದರೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ, ಎದೆಯ ಗಾಯ ಇಂದಿಗೂ ಇದೆ, ನೋಡು. ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಎಂದು ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ವಿವರಿಸಿದಳು.**

**2. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಯುದ್ಧದಲ್ಲಿ ಗಾಯಗೊಂಡ ರಾಹಿಲನು ಮುದುಕಿಯ ಮನೆಗೆ ಬರುತ್ತಾನೆ. ಆ ಸಂದರ್ಭದಲ್ಲಿ ಮುದುಕಿಯ ಸೊಸೆ ಹೆರಿಗೆ ಬೇನೆ ತಿನ್ನುತ್ತಿದ್ದಳು. ಇದನ್ನು ತಿಳಿದ ರಾಹಿಲ "ಅಮ್ಮ ನಾನೊರ್ವ ಡಾಕ್ಟರ್ ಆಕೆಯನ್ನು ಪರೀಕ್ಷಿಸಲೇ" ಎಂದು ಕೇಳಿದಾಗ ಮುದುಕಿಗೆ ಸಂತೋಷವಾಯಿತು. ನಂತರ ಮುದುಕಿ ರಾಹಿಲನ ಒದ್ದೆ ಬಟ್ಟೆಗಳನ್ನು ನೋಡಿ ತನ್ನ ಮಗನ ಬಟ್ಟೆಗಳನ್ನು ತಂದು ಕೊಟ್ಟಳು. ರಾಹಿಲ ಒದ್ದೆಯಾಗಿದ್ದ ಬಟ್ಟೆ ಬದಲಿಸಿಕೊಂಡು ಮುದುಕಿಯ ಸೊಸೆಯನ್ನು ಪರೀಕ್ಷೆಮಾಡ ತೊಡಗಿದನು. ಬಹಳ ಹೊತ್ತಿನ ಪ್ರಯತ್ನದ ಬಳಿಕ ಮಗುವನ್ನು ಹೊರ ತೆಗೆದು ಸೊಸೆಯ ಜೀವ ಉಳಿಸಿದನು. ಆದರೆ ಮಗು ನಿರ್ಜೀವವಾಗಿತ್ತು. ನಂತರ ಮುದುಕಿಯು ಒಂದೆರಡು ಪುಟ್ಟ ಹಲಗೆ ತುಂಡುಗಳನ್ನು ಕೊಟ್ಟಳು. ಅವುಗಳಿಂದ ನೋವಾಗಿದ್ದ ಕಾಲುಗಳ ಆರೈಕೆ ಮಾಡಿಕೊಂಡನು. ಇದೇ ಸಮಯಕ್ಕೆ ಶತ್ರುದೇಶದ ಸೈನಿಕರು ರಾಹಿಲನನ್ನು ಹುಡುಕಿಕೊಂಡು ಬಂದರು. ಆಗ ಮುದುಕಿಯು ರಾಹಿಲನ ಅಸಹಾಯಕತೆಯ ದಯನೀಯವಾದ ನೋಟವನ್ನು ನೋಡಿ ಯುದ್ಧಕ್ಕೆ ಹೋದ ತನ್ನ ಮಗನಂತೆ ಭಾವಿಸಿಕೊಂಡು ಸೊಸೆ ಮಲಗಿದ ಕೋಣೆಯ ಮಂಚದಡಿ ಕಳುಹಿಸಿ ಅವರಿಂದ ರಕ್ಷಿಸಿದಳು. ಶತ್ರುಸೈನಿಕರು ಹೋದ ಮೇಲೆ ರಾಹಿಲನು ರಾತ್ರಿ ಒಂದು ಕೋಣೆಯಲ್ಲಿ ಮಲಗುವಂತೆ ಏರ್ಪಾಟು ಮಾಡಿದಳು.ಒಂದೆರಡು ದಿನಗಳಲ್ಲಿ ಪರಸ್ಪರರಲ್ಲಿ ವಿಶ್ವಾಸ ಮೂಡಿತು.ಇಬ್ಬರೂ ಪರಸ್ಪರ ಸುಖ–ದುಃಖಗಳನ್ನು ಹಂಚಿಕೊಂಡರು. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಪರಸ್ಪರ ಸಹಾಯವನ್ನು ಮಾಡಿದರು.

**3. ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

ಯುದ್ಧ ಇತಿಹಾಸದ ಉದ್ದಕ್ಕೂ ಇರುವಂತಹದ್ದೇ ಆಗಿದೆ. ಸಾಮ್ರಾಜ್ಯ ವಿಸ್ತರಣೆ, ಲೋಭ, ಶಕ್ತಿಯ ಪ್ರದರ್ಶನ, ಕೌಟುಂಬಿಕ ಕಲಹಗಳು, ದ್ವೇಷ ಸಾಧನೆ ಮುಂತಾದವು ಯುದ್ಧಕ್ಕೆ ಕಾರಣವಾಗುತ್ತವೆ. ಉದಾಹರಣೆಗೆ ದ್ವೇಷಸಾಧನೆಯಿಂದ ಕೌರವರಿಗೂ ಪಾಂಡವರಿಗೂ ಯುದ್ಧವಾಗಿ ಕೌರವ ವಂಶ ನಾಶವಾಯಿತು. ಸಾಮ್ರ್ಯಾಜ್ಯ ವಿಸ್ತರಣೆ ಮಾಡಲು ಅಲೆಕ್ಸಾಂಡರ್ ಯುದ್ಧ ಮಾಡಿದನು. ಭಾರತದ ಸಂಪತ್ತಿನ ಲೋಭದಿಂದ ಘಜ್ನಿ ಮಹಮ್ಮದ್ ಭಾರತದ ಮೇಲೆ ದಂಡೆತ್ತಿ ಬಂದ ಭಾರತಕ್ಕೆ ಘಾಸಿಗೊಳಿಸಿದರು , ಶಕ್ತಿಯ ಪ್ರದರ್ಶನ ಮಾಡಲು ಭರತ ಷಟ್ಖಂಡಲಗಳನ್ನು ಗೆದ್ದು ಬಂದನು. ಕೌಟುಂಬಿಕ ಕಲಹದಿಂದ ಎಷ್ಟೋ ರಾಜಮನೆತನಗಳು ನಾಶವಾಗಿವೆ.

ಈ ಯುದ್ಧದ ಭೀಕರತೆಯು ಧರ್ಮ, ದೇಶಗಳ ಭೇದವಿಲ್ಲದೆ ಭಾಗಿಯಾದ ಸೈನಿಕರಿಗೂ ಅವರ ಕುಟುಂಬ ವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಸಂಕಟಕ್ಕೆ ಗಡಿಯಿಲ್ಲ – ಧರ್ಮವಿಲ್ಲ. ಯುದ್ಧ ಕತೆಯಲ್ಲಿ ಮುದುಕಿ ಯುದ್ಧಕ್ಕೆ ಹೋದ ತನ್ನ ಗಂಡನನ್ನು ಕಳೆದುಕೊಂಡಿದ್ದಳು. ಎಲ್ಲರ ಮನಸ್ಸಿಗೂ, ದೇಹಕ್ಕೂ ಗಾಯ ಮಾಡುವುದೆ ಯುದ್ಧದ ಪರಿ , ಈ ಯುದ್ಧ ನನ್ನ ಮೊಮ್ಮಗನನ್ನು ಉಳಿಸಲಿಲ್ಲ ಯಾರಿಗಾಗಿ ,ಯಾತಕ್ಕಾಗಿ ಈ ಯುದ್ಧ ? ಎಂದು ಮುದುಕಿ ಹೇಳಿದ ಮಾತಿನಿಂದ ಯುದ್ಧದ ಪರಿಣಾಮವನ್ನು ಅರಿಯಬಹುದು. ಆದ್ದರಿಂದ ಯುದ್ಧದಲ್ಲಿ ನೊಂದವರು ಧರ್ಮಭಿನ್ನತೆ, ದೇಶಭಿನ್ನತೆ, ವೈರಿ–ಮಿತ್ರ ಎಂಬುದನ್ನೆಲ್ಲ ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ, ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡೆವಳಿಕೆಗಳನ್ನು ಬೆಳೆಸಿಕೊಳ್ಳಬೇಕು ಎಂಬುದೇ ನನ್ನ ಅಭಿಪ್ರಾಯವಾಗಿದೆ.

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

1. " **ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ** "

**ಆಯ್ಕೆ :–** ಈ ವಾಕ್ಯವನ್ನು **'ಶ್ರೀಮತಿ ಸಾರಾ ಅಬೂಬಕ್ಕರ್'** ಅವರ **'ಚಪ್ಪಲಿಗಳು'** ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ಮಾತನ್ನು ವೈದ್ಯಸೈನಿಕನಾದ ರಾಹಿಲನು ಮುದುಕಿಗೆ ಹೇಳಿದನು. ಯುದ್ಧದಲ್ಲಿ ಗಾಯಗೊಂಡು ಸಮುದ್ರಕ್ಕೆ ಬಿದ್ದ ರಾಹಿಲನು ಈಜುತ್ತ ದಡವನ್ನು ಸೇರುತ್ತಾನೆ. ದಡದಲ್ಲಿದ್ದ ಒಂಟಿ ಮನೆಯನ್ನು ನೋಡಿ ಅಲ್ಲಿಗೆ ಬರುತ್ತಾನೆ. ರಾಹಿಲ್ ತೆವಳುತ್ತಾ ಹೇಗೋ ಆ ಮನೆಯ ಮೆಟ್ಟಲು ಹತ್ತಿ ಬಾಗಿಲು ಬಡಿದು "ಅಮ್ಮಾ, ಬಾಗಿಲು ತೆಗಿಯಿರಿ..." ಎಂದನು. "ಹಾಂ... ಯಾರಪ್ಪಾ ಅದೂ? ಈ ಮಳೆಯಲ್ಲಿ, ಈ ಕತ್ತಲ ಗುಹೆಯಲ್ಲಿ...ಯಾರೂ?" ಎಂದು ಮನೆಯ ಒಳಗಿನಿಂದ ಹೆಂಗಸೊಬ್ಬಳು ಕೇಳಿದಳು. ಆಗ ರಾಹಿಲ್ **"ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ. ಪ್ಲೀಸ್..."** ಎಂದು ದಯನೀಯವಾಗಿ ಅಂಗಲಾಚುವ ಸಂದರ್ಭವಾಗಿದೆ.

**ಸ್ವಾರಸ್ಯ :–** ಯುದ್ಧದ ಸಂದರ್ಭದಲ್ಲಿ ಗಾಯಗೊಂಡಿರುವ ರಾಹಿಲನು ರಕ್ಷಣೆಗಾಗಿ ಇನ್ನೊಬ್ಬರ ಸಹಾಯವನ್ನು ಬೇಡುವ ದಯನೀಯ ಸ್ಥಿತಿ ಇಲ್ಲಿ ಅಭಿವ್ಯಕ್ತಗೊಂಡಿದೆ.

2. **"ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."**

**ಆಯ್ಕೆ :–** ಈ ವಾಕ್ಯವನ್ನು **'ಶ್ರೀಮತಿ ಸಾರಾ ಅಬೂಬಕ್ಕರ್'** ಅವರ **'ಚಪ್ಪಲಿಗಳು'** ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ಮಾತನ್ನು ರಾಹಿಲನು ಮುದುಕಿಗೆ ಹೇಳಿದನು. ಮನೆಯ ಒಳಗಡೆಗೆ ಹೋದ ರಾಹಿಲನಿಗೆ ಮುದುಕಿಯ ಸೊಸೆ ಹೆರಿಗೆಯ ನೋವು ತಿನ್ನುತ್ತಿದ್ದಾಳೆ ಎಂದು ಗೊತ್ತಾಗುತ್ತದೆ. ರಾಹಿಲನು ತಾನು ಡಾಕ್ಟರ್ ಎಂದು ಹೇಳಿದಾಗ ಮುದುಕಿಯು ಆತನನ್ನು ತನ್ನ ಸೊಸೆ ಇರುವ ಕೋಣೆಗೆ ಕರೆದು ಕೊಂಡು ಹೋದಳು. ಆಗ ರಾಹಿಲನು **"ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."** ಎಂದು ಮುದುಕಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :–** ರಾಹಿಲನು ಗಾಯಗೊಂಡು ನೋವಿನಲ್ಲಿದ್ದರೂ ಇನ್ನೊಬ್ಬರ ನೋವಿಗೆ ಸ್ಪಂದಿಸುವ ಪರೋಪಕಾರ, ಮಾನವೀಯ ಗುಣ ಈ ವಾಕ್ಯದಲ್ಲಿ ಅಭಿವ್ಯಕ್ತಗೊಂಡಿದೆ.

3. “ **ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?** ”

**ಆಯ್ಕೆ :–** ಈ ವಾಕ್ಯವನ್ನು **‘ಶ್ರೀಮತಿ ಸಾರಾ ಅಬೂಬಕ್ಕರ್’** ಅವರ **‘ಚಪ್ಪಲಿಗಳು’** ಕಥಾಸಂಕಲನದಿಂದ ಆಯ್ದ **‘ಯುದ್ಧ’** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ಮಾತನ್ನು ಮುದುಕಿ ಮನದಲ್ಲಿ ಸ್ಮರಿಸಿಕೊಳ್ಳುತ್ತಾಳೆ. ತಮ್ಮ ಮನೆಯೊಳಗಿರುವ ರಾಹಿಲನು ತಮ್ಮ ದೇಶದವನಲ್ಲ ತಮ್ಮ ದೇಶಕ್ಕೆ ದ್ರೋಹ ಬಗೆವವನು ಎಂಬ ಸಂದೇಹ ಮೂಡಿ ಕ್ಷಣಕಾಲ ಕಣ್ಣನ್ನು ಕೆಂಪು ಮಾಡಿಕೊಂಡಳು. ಸಮೀಪದಲ್ಲಿದ್ದ ರಾಹಿಲನ ಮುಖ ನೋಡಿದಳು. ಆತನ ಅಸಹಾಯಕತೆಯ, ದಯನೀಯ ನೋಟವನ್ನು ನೋಡಿ “ **ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?** ” ಎಂದು ತನ್ನ ಮನದಲ್ಲಿ ಅಂದುಕೊಳ್ಳುವ ಸಂದರ್ಭವಾಗಿದೆ.

ಸ್ವಾರಸ್ಯ :– ರಾಹಿಲನು ತಮ್ಮ ವೈರಿ ದೇಶದವನು ಎಂದು ತಿಳಿದರೂ ಸಹ ಆತನ ಸಹಾಯ, ಮಾನವೀಯಗುಣ,ದಯನೀಯವಾದ ನೋಟವನ್ನು ನೋಡಿ ಮುದುಕಿ ರಾಹಿಲನ ಮೇಲೆ ಮಾತೃವಾತ್ಸಲ್ಯ ತೋರಿಸಿದ ಗುಣ ಸ್ವಾರಸ್ಯವಾಗಿ ಮೂಡಿಬಂದಿದೆ.

4. “ **ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!** ”

**ಆಯ್ಕೆ :–** ಈ ವಾಕ್ಯವನ್ನು **‘ಶ್ರೀಮತಿ ಸಾರಾ ಅಬೂಬಕ್ಕರ್’** ಅವರ **‘ಚಪ್ಪಲಿಗಳು’** ಕಥಾಸಂಕಲನದಿಂದ ಆಯ್ದ **‘ಯುದ್ಧ’** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ಮಾತನ್ನು ಮುದುಕಿಯು ತನ್ನ ದೇಶದ ಸೈನಿಕರಿಗೆ ಹೇಳಿದಳು. ರಾಹಿಲನು ಮುದುಕಿಯ ಮನೆಯಲ್ಲಿ ರಕ್ಷಣೆ ಪಡೆಯುತ್ತಿದ್ದ ಸಂದರ್ಭದಲ್ಲಿ ಸೈನಿಕ ಉಡುಪಿನಲ್ಲಿದ್ದ ನಾಲ್ಕೈದು ಜನರು ಮುದುಕಿಯ ಮನೆಗೆ ಬಂದು “ಈ ಕಡೆ ಯಾರಾದರೂ ಗಾಯಗೊಂಡ ಸೈನಿಕರು ಬಂದಿದ್ದಾರೆಯೇ?” ಎಂದು ಕೇಳುತ್ತಾ ಒಳನುಗ್ಗಿದರು. ಮುದುಕಿ “ಇಲ್ಲವಲ್ಲಾ?” ಎಂದು ನುಡಿದಳು. “ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ.”ಎಂದು ಒಬ್ಬ ಅಪ್ಪಣೆ ಕೊಟ್ಟನು. ಉಳಿದವರು ಒಳಹೊಕ್ಕು ಶೋಧಿಸುವಾಗ ಮುದುಕಿ ಅಳುತ್ತಾ, ಹೂಂ...ನೋಡಿ; **“ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!”** ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :–** ಯುದ್ಧ ತನ್ನ ಮೊಮ್ಮಗನನ್ನು ಬಲಿ ತೆಗೆದುಕೊಂಡಿತು ಎಂಬ ಮುದುಕಿಯ ದುಃಖದ ಭಾವನೆ ಈ ವಾಕ್ಯದಲ್ಲಿ ಮಡುಗಟ್ಟಿದೆ.

**ಉ) ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ರಾಹಿಲನ ದೇಹದಲ್ಲಿ **ಹೊಸರಕ್ತ** ಸಂಚಾರವಾದಂತಾಯಿತು.
   ಅ) ಶಕ್ತಿ ಆ) ವಿದ್ಯುತ್ ಇ) ಹೊಸರಕ್ತ ಈ) ಮಿಂಚು
2. ನರಳಾಟದ ಬೆನ್ನಲ್ಲೇ ಹಿರಿಯ ಹೆಂಗಸೊಬ್ಬಳ **ಸಾಂತ್ವನ** ಕೇಳಿ ಬಂತು.
   ಅ) ಆರ್ತನಾದ ಆ) ಅಳು ಇ) ಚೀರಾಟ ಈ) ಸಾಂತ್ವನ
3. ಮುದುಕಿ ಮತ್ತು ಸೊಸೆಯ **ರೋದನ** ಮನೆಯ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿತು.
   ಅ) ಸಂತಸ ಆ) ಜಗಳ ಇ) ರೋದನ ಈ) ಸಂಗೀತ
4. ಯಾರಾದರೂ ಗಾಯಗೊಂಡ **ಸೈನಿಕರು** ಈ ಕಡೆ ಬಂದಿದ್ದಾರೆಯೇ?
   ಅ) ಜನರು ಆ) ಸೈನಿಕರು ಇ) ಗಂಡಸರು ಈ) ಹೆಂಗಸರು
5. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ **ಮಗನು** ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು.ಅ)
   ಅ)ತಂದೆಯು ಆ) ತಾಯಿಯು ಇ) ಮಗಳು ಈ) ಮಗನು

**ಭಾಷಾ ಚಟುವಟಿಕೆ**

**1. ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**

ಕಾರ್ಯ, ಕತ್ತಲೆ, ಇಲ್ಲ, ಶಸ್ತ್ರ, ಸ್ಫೋಟಿಸು, ಎಚ್ಚರ, ಕಣ್ಣಿಗೆ, ಅದ್ಭುತ, ಡಾಕ್ಟರ್, ಬಟ್ಟೆ.

**ವಿಜಾತೀಯ ಸಂಯುಕ್ತಾಕ್ಷರಗಳು –** ಕಾರ್ಯ, ಶಸ್ತ್ರ, ಸ್ಫೋಟಿಸು , ಅದ್ಭುತ, ಡಾಕ್ಟರ್

**2. ನೀಡಿರುವ ಪದಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳನ್ನು ಆರಿಸಿ ಬರೆಯಿರಿ.**

ಸಮನಾಗಿ, ದೇಶ, ಮನೆಯ, ರೋದನ, ಬಳಿಕ, ನೆಲ, ಮದುವೆ, ಮಾನುಷ, ಹೊತ್ತು, ಒಳಗೆ

| | | | | |
|---|---|---|---|---|
| ಸಮನಾಗಿ –ಸ | ದೇಶ – ಶ | ಮನೆಯ – ಯ | ರೋದನ –ರೋ | ಬಳಿಕ – ಳಿ |
| ನೆಲ – ಲ | ಮದುವೆ – ವ | ಮಾನುಷ – ಷ | ಹೊತ್ತು – ಹೊ | ಒಳಗೆ – ಮಳ |

**3. ಈ ಪಾಠದಲ್ಲಿ ಬರುವ ಇಂಗ್ಲಿಷ್ ಪದಗಳನ್ನು ಪಟ್ಟಿ ಮಾಡಿ.**

ಡಾಕ್ಟರ್ ,ರೇಡಿಯೋ , ಗ್ರೌಂಡ್ , ಪೈಲಟ್, ಬ್ಲಾಕ್ ಔಟ್ , ಪ್ಲೀಸ್ ,ಬಾಂಬ್ , ಸಾರ್.

**4. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ನಾಲ್ಕನೆಯ ಪದವನ್ನು ಬರೆಯಿರಿ.**

ಅ) ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : **ಮಹಾಪ್ರಾಣಾಕ್ಷರಗಳು**

ಆ) ವರ್ಗೀಯ ವ್ಯಂಜನಾಕ್ಷರಗಳು : 25 : : ಅವರ್ಗೀಯ ವ್ಯಂಜನಾಕ್ಷರಗಳು **: 9**

ಇ) ಆ, ಈ, ಊ : ದೀರ್ಘಸ್ವರಗಳು : : ಅ, ಇ, ಉ, ಋ : **ಹ್ರಸ್ವಸ್ವರಗಳು**

ಈ) ಸ್ವರಗಳು : 13 : : ಯೋಗವಾಹಗಳು : **2**